

ಚಾಮರಾಜನಗರದ ಮಹೇಶ್, ಬೆಂಗಳೂರಿನ ಯೋಗೇಶ್, ಮೈಸೂರಿನ ನವೀನ್ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಇಂಜಿನಿಯರ್‌ಗಳು. ಕೈ ತುಂಬಾ ಸಂಬಳ ಬರುತ್ತಿದ್ದ ಕೆಲಸ. ಬೆಂಗಳೂರಿನಲ್ಲೇ ಗೂಡು ಕಟ್ಟಿಕೊಂಡು ಸಂಸಾರ ಮಾಡುತ್ತಿರುವಾಗಲೇ ಕೃಷಿ ಮಾಡಬೇಕು ಎಂದು ಆಲೋಚನೆ ಮಾಡಿ ಒಂದು ವರ್ಷದ ಹಿಂದ ಮಾಡುತ್ತಿದ್ದ ಕೆಲಸಕ್ಕೆ ರಾಜೀನಾಮೆ ನೀಡಿ ಗಾಣದ ಎತ್ತಿನ ಮೂಲಕ ದೇಶಿ ಶೈಲಿಯಲ್ಲಿ ಎಣ್ಣೆ ತೆಗೆಯುವ ಕೆಲಸಕ್ಕೆ ಇಳಿದಿದ್ದಾರೆ.



**ಸಾಫ್ಟ್‌ವೇರ್ ಇಂಜಿನಿಯರ್‌ಗಳ ಗ್ರಾಮ ಭಾರತದ ಕನಸು**

# ಐಟಿ ಕೆಲಸ ಬಿಟ್ಟು ಗಾಣ ಸೇರಿದ ಮೂವರು ಗೆಳೆಯರು

## ನಾವು ಗೆದ್ದರೆ ಸಾವಯವ ಗೆದ್ದಂತೆ

ಇಲ್ಲಿ ದೇಶಿ ಎತ್ತುಗಳೇ ಗಾಣ ತಿರುಗುವುದು, ಲ್ಯಾಬ್‌ನಲ್ಲಿ ಟೆಸ್ಟ್ ಆಗಿ, ರಾಸಾಯನಿಕ ಮುಕ್ತ ಎಂದು ಸಾಬೀತಾದ ಶೇಂಗಾ, ಎಳ್ಳು, ಕೊಬ್ಬರಿಯೇ ಗಾಣದಲ್ಲಿ ಅರೆಯಲ್ಪಡುವುದು. 'ನಮ್ಮ ಮುಂದೆ ಈಗ ಸಾಕಷ್ಟು ಸವಾಲುಗಳಿವೆ. ನಾವು ಗೆದ್ದು ತೋರಿಸಿದರೆ ಮಾತ್ರ ಈ ಉದ್ಯಮ ಮುಂದೆ ಬೆಳೆಯುತ್ತದೆ. ಲಕ್ಷಾಂತರ ರುಪಾಯಿ ಸಂಬಳ ಬಿಟ್ಟು ದೇಶಿಯತೆ ಉಳಿಸಬೇಕು ಎಂದುಕೊಂಡು ಬಂದ ನಮ್ಮ ಆಶಯವೂ ಈಡೇರುತ್ತದೆ' ಎನ್ನುವ ಮಹೇಶ್, ಯೋಗೇಶ್, ನವೀನ್ ಮಾಡುತ್ತಿರುವುದು ಅಪರೂಪದ ಕಾರ್ಯವೇ ಸರಿ.



• ಕೆಂಡಪ್ರದಿ

ಅದೊಂದು ದಿನ ಕೃಷಿಯನ್ನೇ ಮಾಡಬೇಕು ಎಂದು ನಿರ್ಧಾರ ಮಾಡಿ ಕೆಲಸಕ್ಕೆ ರಾಜೀನಾಮೆ ನೀಡಿದ ಸಾಫ್ಟ್‌ವೇರ್ ಇಂಜಿನಿಯರ್‌ಗಳಾದ ಮಹೇಶ್, ಯೋಗೇಶ್, ನವೀನ್ ಏನು ಮಾಡಬೇಕು ಎಂದು ಯೋಚಿಸುತ್ತಾ ರಾಜ್ಯಾದ್ಯಂತ ಸುತ್ತಾಡಿ, ಹೈನುಗಾರಿಕೆ ಮಾಡಬಹುದು, ತರಕಾರಿ ಬೆಳೆಯಬಹುದು, ತೋಟ ಮಾಡಬಹುದು, ಹಣ್ಣು ಬೆಳೆಸಬಹುದು ಎನ್ನುವ ಎಲ್ಲಾ ಆಲೋಚನೆಗಳನ್ನೂ ದೂರ ತಳ್ಳಿ ಕೈಗೆತ್ತಿಕೊಂಡದ್ದು ದೇಶಿ ಶೈಲಿಯಲ್ಲಿ ಎಣ್ಣೆ ತೆಗೆಯುವ ಕಾಯಕ.

### ರಾಸಾಯನಿಕ ಮುಕ್ತವೇ ಆಶಯ

'ನಾವು ಬೇರೆ ಬೇರೆ ದೇಶಗಳನ್ನು ಸುತ್ತಾಡಿದಾಗ ಅಲ್ಲಿ ದೇಶಿ ತಳಿಗಳು, ದೇಶಿ ಸಂಸ್ಕೃತಿ, ದೇಶಿ ಆಹಾರ ಪದ್ಧತಿಗಳು ಜೀವಂತವಾಗಿ ಇದ್ದದ್ದು ಕಾಣಿಸುತ್ತಿತ್ತು. ಆದರೆ ಅದೇ ವೇಳೆಯಲ್ಲಿ ನಮ್ಮ ಹಳ್ಳಿಗಳಲ್ಲೇ ದೇಶಿಯತೆ ನಾಶವಾಗುತ್ತಿದ್ದದ್ದು, ಸಾಮಾನ್ಯ ಬೆಳೆಗೂ ರಾಸಾಯನಿಕ ಬಳಕೆ ಮಾಡುತ್ತಿದ್ದದ್ದು ಗೊತ್ತಾಯಿತು. ಸಾಮಾನ್ಯವಾಗಿ ಒಂದು ಕೆಜಿ ಒಳ್ಳೆಯ ಕಡಲೆಕಾಯಿ ಬೀಜ (ಶೇಂಗಾ) 60ರಿಂದ 70 ರುಪಾಯಿ ಇದೆ. ಸುಮಾರು ಮೂರು ಕೆಜಿ ಕಡಲೆಬೀಜದಿಂದ ಕೇವಲ ಒಂದು ಕೆಜಿ ಶುದ್ಧ ಎಣ್ಣೆ ತೆಗೆಯಬಹುದು ಅಷ್ಟೇ. ಆದರೆ ಮಾರುಕಟ್ಟೆಯಲ್ಲಿ ಕೇವಲ 120, 130 ರುಪಾಯಿಗೆ ಒಂದು ಕೆಜಿ ಎಣ್ಣೆಯನ್ನು ಹೇಗೆ ಕೊಡುತ್ತಾರೆ? ತಮ್ಮ ಲಾಭಕ್ಕಾಗಿ ನಮ್ಮ ಆರೋಗ್ಯ ಹೇಗೆ ಕೆಡುತ್ತಿದೆ ಎನ್ನಿಸಿತು. ಅದಕ್ಕಾಗಿಯೇ ನಾವು ಸಂಪೂರ್ಣವಾಗಿ ಸಾಂಪ್ರದಾಯಿಕ ಶೈಲಿಯಿಂದ ಕೊಬ್ಬರಿ, ಕಡಲೇಬೀಜ, ಎಳ್ಳೆಣ್ಣೆಯನ್ನು ಯಾಕೆ ತಯಾರು ಮಾಡಬಾರದು ಎಂದುಕೊಂಡು ಈ ಕ್ಷೇತ್ರಕ್ಕೆ ಕಾಲಿಟ್ಟೆವು' ಎನ್ನುತ್ತಾರೆ ಮಹೇಶ್.

### ನಷ್ಟವಾಗುತ್ತಿದ್ದೆ, ಆದರೂ ಓಕೆ

ಪ್ರಸ್ತುತ ಕೆ.ಆರ್. ನಗರದಲ್ಲಿ ಗಾಣದ ಎತ್ತುಗಳ ಮೂಲಕ ಎಣ್ಣೆ ತೆಗೆಯುತ್ತಿರುವ ಈ ಮೂವರೂ ನಷ್ಟದ ಸುಳಿಯಲ್ಲಿಯೇ ಇದ್ದಾರೆ. ಇದಕ್ಕೆ ಕಾರಣ ರಾಸಾಯನಿಕ ರಹಿತ ಶೇಂಗಾ, ಕೊಬ್ಬರಿ, ಎಳ್ಳು ಮತ್ತು ಮಾರುಕಟ್ಟೆ. 'ನಾವು ಉದ್ಯಮ ಶುರು ಮಾಡಿ ಲಾಭ ಮಾಡಿಕೊಳ್ಳಬೇಕು ಎಂದು ಹೊರಟವರಲ್ಲ. ನಮ್ಮ ಮೂಲ ಉದ್ದೇಶ ಕೃಷಿ ಮಾಡಬೇಕು. ನಾವು ಮೊದಲು ಕಂಡಂತಹ ಸ್ವಾವಲಂಬಿ ಗ್ರಾಮಗಳನ್ನು ನಿರ್ಮಾಣ ಮಾಡಬೇಕು ಎಂಬುದು. ಅದಕ್ಕಾಗಿಯೇ ಇಂದು ನಾವೇ ರೈತರ ಬಳಿಗೆ ಹೋಗಿ ರಾಸಾಯನಿಕ ಮುಕ್ತ ಬೇಸಾಯಕ್ಕೆ ಸಹಾಯ ಮಾಡುತ್ತೇವೆ. ಅವರ ಭೂಮಿ ಮತ್ತು ಬದುಕು ಎರಡೂ ಚೆನ್ನಾಗಿರಬೇಕು ಎಂಬುದು ನಮ್ಮ ಆಶಯ. ನಾವೇ ಅವರಿಂದ ಬೆಳೆ ಬೆಳೆಸಿ ಮಾರುಕಟ್ಟೆ ದರಕ್ಕಿಂತ ಒಂದು ರುಪಾಯಿ ಹೆಚ್ಚು ಹಣ ನೀಡಿ ಅವರ ಬಳಿಗೇ ಹೋಗಿ ಬೆಳೆಯನ್ನು ಕೊಂಡುಕೊಳ್ಳುತ್ತಾ ಇರುವುದರಿಂದ ಅವರಿಗೆ ಲಾಭವಾಗುತ್ತಿದೆ. ಮತ್ತೊಂದು ಕಡೆ ನಾವು ಉತ್ಪಾದಿಸಿದ ಎಣ್ಣೆಯನ್ನು ಬೆಂಗಳೂರಿನಂತಹ ನಗರದಲ್ಲಿ ನಾವೇ ಮಾರಾಟ ಮಾಡಿಕೊಳ್ಳುತ್ತಿದ್ದೇವೆ. ಇದರಿಂದ ಸದ್ಯದಲ್ಲಿ ನಷ್ಟವೇ ಆಗುತ್ತಿದ್ದರೂ, ದೇಶಿ ಪದ್ಧತಿಯನ್ನು ಉಳಿಸುತ್ತಿರುವುದಕ್ಕೆ ಖುಷಿ ಇದೆ' ಎನ್ನುವ ಈ ಮೂವರು ಇದುವರೆಗೂ ಸುತ್ತಮುತ್ತಲ ಸಾಕಷ್ಟು ಯುವಕರಿಗೆ ತರಬೇತಿ ನೀಡುತ್ತಾ ಬಂದಿದ್ದಾರೆ.

### ಆಂಧ್ರಪ್ರದೇಶದಿಂದ ಪಾಠ

ಅಪ್ಪಟ ದೇಶಿ ಶೈಲಿಯಲ್ಲಿ ಗಾಣದ ಮೂಲಕ ಎಣ್ಣೆ ತೆಗೆಯಬೇಕು ಎಂದು ಹೊರಟ ಈ ಮೂವರಿಗೆ ಮೊದಲು ಎದುರಾಗಿದ್ದು ಹೇಗೆ ಇದನ್ನೆಲ್ಲಾ ಮಾಡುವುದು ಎಂದು. ಯಾಕೆಂದರೆ ಈಗ ಎಲ್ಲಿಯೂ ಗಾಣದ ಎತ್ತುಗಳ ಮೂಲಕ ಎಣ್ಣೆ ತೆಗೆಯುವ ಕ್ರಮ ಉಳಿದಿಲ್ಲ. ಅದಕ್ಕಾಗಿಯೇ ಇವರು ಆಂಧ್ರಪ್ರದೇಶದಲ್ಲಿ ಯಾರೋ ಒಬ್ಬರು ಗಾಣದ ಮೂಲಕ ಎಣ್ಣೆ ತೆಗೆಯುತ್ತಾರೆ ಎಂದು ಗೊತ್ತಾಗಿ ಅವರನ್ನು ಹುಡುಕಿ ಹೊರಟಾಗ ಅವರು ಆ ವೃತ್ತಿ ನಿಲ್ಲಿಸಿ ವರ್ಷಗಳೇ ಆಗಿರುವುದು ತಿಳಿಯುತ್ತೆ. ಅವರೇ ಇದೆಲ್ಲಾ ಇಂದು ಆಗುವುದಿಲ್ಲ, ಕೈ ಸುಟ್ಟುಕೊಳ್ಳುತ್ತೀರಿ ಎಂದು ಹೇಳಿದರೂ ಅವರಿಂದ ಹೇಗೆಲ್ಲಾ ಮಾಡಬೇಕು. ಏನೇನು ವ್ಯವಸ್ಥೆ ಮಾಡಿಕೊಳ್ಳಬೇಕು ಎಂಬುದನ್ನೆಲ್ಲಾ ಅಲ್ಲಿಯೇ ವಾರಗಟ್ಟಲೆ ಇದ್ದು ತಿಳಿದುಕೊಂಡು ಕೆ.ಆರ್. ನಗರದಲ್ಲಿ ಈ ಸಾಹಸಕ್ಕೆ ವರ್ಷದ ಹಿಂದೆ ಇಳಿದೇಬಿಡುತ್ತಾರೆ. ಇವರೊಂದಿಗೆ ನೀವು ಮಾತನಾಡಿ ದೂರವಾಣಿ ಸಂಖ್ಯೆ 9972374918